ಲೆಕ್ಕಿಸದೇ ಎಷ್ಟೇ ಪ್ರಯತ್ನ ಮಾಡಿದರೂ ಸಮಾಜದಲ್ಲಿ ಸ್ವಲ್ಪಮಟ್ಟಿಗೆ ಅವರಿಗೆ ಬೆಂಬಲ ಕೊಡಬೇಕಾಗುತ್ತದೆ. ಆದ್ಯಷ್ಟಿಯಿಂದ ತಮ್ಮ ಸಹಕಾರವನ್ನು ಕೇಳುತ್ತಿದ್ದೇನೆ. ಸಿಬ್ಬಂದಿವರ್ಗಕ್ಕೆ ವಾಹನ ಸೌಕರ್ಯ ಮುದ್ದುಗುಂಡು ಕೊಟ್ಟಿದ್ದರೂ ಕಳ್ಳಸಾಗಾಣಿಕೆದಾರರು ಇವರ ಮೇಲೆ ಗುಂಡು ಹಾರಿಸಿ ಜೀವತೆಗೆದ ಎಷ್ಟೋ ಪ್ರಕರಣ ತಮಗೆ ತಿಳಿದಿದೆ. ಗಂಧದ ಮರಗಳನ್ನು ಹೊರಗೆ ಇರುವ ಅನಧಿಕೃತ ಕಾರ್ಖಾನೆಗಳಿಗೆ ಸಾಗಾಣಿಕೆ ಮಾಡುವುದು ನಡೆಯುತ್ತಿದೆ. ಮೊನ್ನೆ ಕಾಸರಗೋಡಿನಲ್ಲಿ ಗಂಧವನ್ನು ಉತಿಟ್ಟಿದ್ದ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಕಳ್ಳಸಾಗಾಣಿಕೆ ತಡೆಗಟ್ಟಲು ರೈತರ ಹೊಲದಲ್ಲಿ ಬೆಳೆದ ಗಂಧದ ಮರಗಳಿಗೂ ೯೦ ಭಾಗದಷ್ಟು ಹಣವನ್ನು ಅವರಿಗೆ ಕೊಡುವ ವ್ಯವಸ್ಥೆಯನ್ನು ಕೂಡಾ ಮಾಡಿದ್ದೇವೆ. ಕಳ್ಳಸಾಗಾಣಿಕೆ ತಡೆಯಲು ಸಿಬ್ಬಂದಿಗಳ ಕರ್ತವ್ಯದ ಜೊತೆ ಸಾರ್ವಜನಿಕರ, ತಮ್ಮೋಥಹಪರ ಸಹಕಾರವೂ ಬೇಕಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಬಿ. ರಾಜುಗೌಡ.—ಈ ಸದನವನ್ನು ಸಚಿವರು ತಪ್ಪುದಾರಿಗೆ ಎಳೆಯುತ್ತಿದಾರೆ. ಸರ್ಕಾರ ಕೊಟ್ಟಿರತಕ್ಕ ಮಾಹಿತಿ ಸತ್ಯಕ್ಕೆ ದೂರವಾದುದೆಂಬುದನ್ನು ರುಜುವಾತು ಪಡಿಸುವುದಕ್ಕೆ ಇಷ್ಟ ಪಡುತ್ತೇನೆ, ರಾಯಚೂರು ಜಿಲ್ಲೆಯಲ್ಲಿ ೧೯೮೬–೮೭ನೇ ಸಾಲಿನಲ್ಲಿ ೩೫೭೦ ರೂ.ಗಳ ಮೌಲ್ಯದ ಗಂಧದ ಮಾಲನ್ನು ಪತ್ತೆಪಡಿಸಿಕೊಳ್ಳಲಾಗಿದೆ ಎಂಬುದಾಗಿ ತಿಳಿಸಿದ್ದು, ಅದಕ್ಕೆ ಸಂಬಂಧಪಟ್ಟ ಒಂದೂ ವೆಹಿಕಲ್‌ನ್ನು ಸೀಜ್ ಮಾಡಿಲ್ಲವೆಂದು ತಿಳಿಸಿದ್ದಾರೆ. ಅದೇ ರೀತಿ ೧೯೮೭–೮೮ನೇ ಸಾಲಿನಲ್ಲಿ ಅಲ್ಲಿ ಕಳ್ಳಸಾಗಾಣಿಕೆ ಆಗಿಲ್ಲವೆಂದು ಹೇಳಿ ೨ ವಹಿಕಲ್‌ಗಳನ್ನು ಹಿಡಿದಿದ್ದೇವೆಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾದುದಲ್ಲವೆ ? ಇಲಾಖೆಯಿಂ ಸಿಬ್ಬಂದಿ ಎಷ್ಟು ಪ್ರಕರಣದಲ್ಲಿ ಶಾಮೀಲಾಗಿದ್ದಾರೆ ಎಂಬುದೇ ನನ್ನ ಪ್ರಶ್ನೆ ಅದಕ್ಕೆ ಉತ್ತರ ಹೇಳಿ.

ಶ್ರೀ ಬಿ. ರಾಚಯ್ಯ.—ಗಂಧದ ಮರ ಕಳ್ಳಸಾಗಾಣಿಕೆಯ ಬಗ್ಗೆ ಮಾತ್ರ ಆ ರೀತಿ ಹೇಳಲಾಗಿದೆ. ಆದರಜೊತೆಗೆ ಬೇರೆ ಕಳ್ಳಸಾಗಾಣಿಕೆಯಲ್ಲಿ ವಹಿಕಲ್‌ಗಳನ್ನು ಹಿಡಿದಿರುವುದನ್ನೂ ಕೂಡ ತಿಳಿಸಲಾಗಿದೆ.

ಉರವೆ ಕಟ್ಟಿಗೆಯ ಸರಬರಾಜು

೪೪೬. ಶ್ರೀ ಡಿ. ಎ. ಚಿನ್ನಪ್ಪ (ಮರಕೆರಾ).—ಮಾನ್ಯ ವ್ಯವಸಾಯ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯವರು ಸಾರ್ವಜನಿಕರಿಗೆ ಸೌದೆಯನ್ನು ಕಡಿಮೆ ದರದಲ್ಲಿ ಮಾರಾಟ ಮಾಡುತ್ತಿರುವುದು ನಿಜವೆ.

ಆ) ಹಾಗಿದ್ದರೆ ಈ ಪದ್ಧತಿಯನ್ನು ರಾಜ್ಯದ ಉಳಿದ ಜಿಲ್ಲೆಗಳಿಗೂ ಅನ್ವಯಿಸಲಾಗುವುದೇ.

ಇ) ಉತ್ತರ ಕನ್ನಡ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಒಂದು ಟನ್ ಸೌದೆಯ ದರವೇನು.

ಈ) ೧೯೮೬–೮೭ನೇ ಮತ್ತು ೧೯೮೭ ೧೯೮೮ನೇ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಮತ್ತು ಕೊಡಗು ಜಿಲ್ಲೆಯಲ್ಲಿಸರಬರಾಜು ಮಾಡಿದ ಸೌದೆಯ ಪ್ರಮಾಣ.

ಶ್ರೀ ಬಿ. ರಾಚಯ್ಯ (ವ್ಯವಸಾಯ ಮತ್ತು ಅರಣ್ಯ ಮಂತ್ರಿಗಳು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಅರಣ್ಯ ಪ್ರದೇಶದಿದ್ದು, ಸೌದೆ ಸಂಗ್ರಹಿಸುವ ಖರ್ಚು ಕಡಿಮೆ ಇರುವುದರಿಂದ ಸಾರ್ವಜನಿಕರಿಗೆ ಸೌದೆ ಮಾರಾಟ ದರ ಕಡಿಮೆ ಇದೆ.

ಆ) ಉಳಿದ ಪ್ರದೇಶಗಳಲ್ಲಿ ಹೆಚ್ಚು ಪ್ರಮಾಣದ ಅರಣ್ಯವಿಲ್ಲವಾದ್ದರಿಂದ ಸೌದೆ ತಯಾರಿಕೆ ಮತ್ತು ಸಾಗಾಣಿಕೆಗೆ ಹೆಚ್ಚು ಖರ್ಚು ತಗಲುವುದರಿಂದ, ಸೌದೆ ಮಾರಾಟ ಬೆಲೆಯನ್ನು ಉತ್ತರ ಕನ್ನಡ ಜಿಲ್ಲೆಯಲ್ಲಿರುವಂತೆ ಅನ್ವಯಿಸಲು ಸಾಧ್ಯವಿಲ್ಲ.

ಇ) ಉತ್ತರ ಕನ್ನಡ ಜಿಲ್ಲೆ ೧ ಟನ್ ಸೌದೆ ದರ ರೂ. ೧೫೦.೦೦ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಯಾ ಪ್ರದೇಶಗಳಿಗೆ ಅನುಗುಣವಾಗಿ ಒಂದು ಟನ್ ಸೌದೆ ದರ ರೂ. ೨೦೩ ರಿಂದ ರೂ. ೫೧೦ರ ವರೆಗೆ ಇದೆ.

ಈ)

ಜಿಲ್ಲೆ	೧೯೮೬–೮೭	೧೯೮೭–೮೮
ಉತ್ತರ ಕನ್ನಡ	೧,೭೬,೧೧೫ ೩೫೬	೧,೯೬,೧೭೬.೨೩೫
ಕೊಡಗು	೧೮,೧೫೯.೮೯೧	೧೧,೯೫೩.೦೭೩

ಶ್ರೀ ಡಿ. ಎ. ಚಿನ್ನಪ್ಪ.—ಉತ್ತರ ಕನ್ನಡ, ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅರಣ್ಯ ಹೆಚ್ಚು ಇದ್ದು, ಸೌದೆ ಸಂಗ್ರಹಿಸುವ ಖರ್ಚು ಕಡಿಮೆ ಇದೆ ಎಂಬುದಾಗಿ ತಿಳಿಸಿದ್ದಾರೆ. ಎಲ್ಲ ಕಡೆ ಒಂದೇ ಬೆಲೆ ಇರುವುದರಿಂದ, ಕಡಿಮೆ ಇರುವ ಪ್ರಶ್ನೆ ಎಲ್ಲಿ ಬಂತು ? ಅದರ ಡಿಸ್ಟ್ರಿಬ್ಯೂಷನ್ ಚಾರ್ಜಸ್ ಕೂಡ ಒಂದೇ ಆಗಿರುವುದರಿಂದ ಎಷ್ಟೋ ವರ್ಷಗಳಿಂದ ೧೫೦ ರೂ.ಗಳು ಇದ್ದುದನ್ನು ಈಗ ೫೧೦ ರೂ. ಗಳಿಗೆ ಹೆಚ್ಚು ಮಾಡಿರುವುದರಿಂದ ಬಹಳ ತೊಂದರೆಯಾಗಿದೆ. ಇದನ್ನು ಕಡಿಮೆ ಮಾಡಬೇಕಾಗುತ್ತದೆ. ಟನ್ ಸೌದೆ ಬೆಲೆ ೫೧೦ ರೂ.ಗಳೆಂದು ಮಾಡಿರುವುದರಿಂದ ಬಡವರು ಯಾರೂ ಸೌದೆಯನ್ನು ಕೊಂಡು ಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಬಡವರಿಗೆ ಸೌದೆಯನ್ನು ಕೊಡುವ ಪ್ರಯತ್ನ ಮಾಡುವುದಾದರೆ, ಅದರ ಬೆಲೆಯನ್ನು ಇಳಿಸಲೇಬೇಕು. ಮತ್ತೆ ಬಡಜನರಿಗೆ ಕೊಡತಕ್ಕ ಸೌದೆಯಲ್ಲಿ ಗ್ರೀನ್‌ಕಾರ್ಡ್ ದಾರರು ಯಾರ್ಯಾರು ಇದ್ದಾರೆ, ಅವರಿಗೆ ರಿಯಾಯಿತಿ ಬೆಲೆಯಲ್ಲಿ ಸೌದೆಯನ್ನು ಸರಬರಾಜು ಮಾಡ ಬೇಕಾಗುತ್ತದೆ. ಕೊಡಗು, ದಕ್ಷಿಣ ಕನ್ನಡ ಹಾಗೂ ಇತರೆ ಅರಣ್ಯಗಳಲ್ಲಿ ಮರ ಬಿದ್ದು ಹೋಗಿರುತ್ತವೆ. ಅದನ್ನು ಸಂಗ್ರಹಣೆ ಮಾಡುತ್ತಿಲ್ಲ. ಇದರಿಂದ ಕೂಡ ನಷ್ಟವಾಗುತ್ತಿದೆ. ಈ ರೀತಿಯ ಮರಗಳನ್ನು ಸಂಗ್ರಹಣೆ ಮಾಡಿ ಸೌದೆಯ ಬೆಲೆಯನ್ನು ಕಡಿಮೆ ಮಾಡಬೇಕು. ಇದರಿಂದ ಕೊಡಗಿನಿಂದ ಸೌತ್‌ಕೆನರ ಜಿಲ್ಲೆಗೆ ಪರ್ಮಾವಣೆ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕೊಟ್ಟಿರುತಕ್ಕ ಸಲಹೆಗಳ ಬಗ್ಗೆ ತೀವ್ರವಾಗಿ ಗಮನ ಹರಿಸುತ್ತೇನೆ. ಅದನ್ನು ಪರಿಶೀಲನೆ ಮಾಡಿ, ಏನು ಪುನರ್ವ್ಯವಸ್ಥೆ ಮಾಡಬೇಕೋ ಅದನ್ನು ಮಾಡುತ್ತೇನೆ.

ಕಲಘಟಗಿ ತಾಲ್ಲೂಕಿಗೆ ಸರ್ಕಾರಿ ಪ್ರೌಢಶಾಲೆಗಳು

೫೬೧. ಶ್ರೀ ಪಿ. ಸಿ. ಸಿದ್ದನಗೌಡ್ರ (ಕಲಘಟಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಲಘಟಗಿ ತಾಲ್ಲೂಕಿನಲ್ಲಿರುವ ಸಂಗಮೇಶ್ವರ ಸೂರಶಟ್ಟಿ ಕೊಪ್ಪದ ಗ್ರಾಮಂಗಳಿಗೆ ಸರ್ಕಾರಿ ಪ್ರೌಢಶಾಲೆಯೊಂದನ್ನು ಮಂಜೂರ್ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಯಾವಾಗ ಪ್ರಾರಂಭಿಸಲಾಗುವುದು ?

ಇ) ಕಲಘಟಗಿ ತಾಲ್ಲೂಕಿನ ಭವಿಷ್ಯಗಟ್ಟಿ ಗ್ರಾಮದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಪ್ರೌಢಶಾಲೆ ಮಂಜೂರ್ಮಾಡಲಾಗಿದೆಯೇ ?

ಈ) ಹಾಗಿದ್ದಲ್ಲಿ ಈ ವಿಷಯ ಯಾವ ಹಂತದಲ್ಲಿದೆ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ಇಲ್ಲಾ.

ಆ) (ಅ) ಪ್ರಶ್ನೆಗೆ ನೀಡಿರುವ ಉತ್ತರದಿಂದ (ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಇಲ್ಲಾ.

(ಈ) (ಇ) ಪ್ರಶ್ನೆಗೆ ನೀಡಿರುವ ಉತ್ತರದಿಂದ (ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಪಿ. ಸಿ. ಸಿದ್ದನಗೌಡ.—ಈ ಹಿಂದೆ ಇದೇ ವಿಚಾರದಲ್ಲಿ ನಾನೊಂದು ಪ್ರಶ್ನೆಯನ್ನು ಕೇಳಿದ್ದಾಗ ಪರಿಶೀಲಿಸುತ್ತೇವೆಂದು ಸರ್ಕಾರದವರು ಹೇಳಿದ್ದರು, ಈ ಸಲ ಅದೇ ಪ್ರಶ್ನೆಯನ್ನು ಕೇಳಿದಾಗ ಅದು ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ. ಇದರ ಬಗ್ಗೆ ನನ್ನ ವಿನಂತಿ ಏನೆಂದರೆ ಆ ತಾಲ್ಲೂಕಿನಲ್ಲಿರ ತಕ್ಕದ್ದು ಕೇವಲ ಒಂದೇ ಒಂದು ಹೈಸ್ಕೂಲು. ಅದು ಅತ್ಯಂತ ಹಿಂದುಳಿದಿರತಕ್ಕ ಪ್ರದೇಶವಾಗಿದೆ. ಪರಿಶಿಷ್ಟ ಜಾತಿ ಜನಾಂಗದವರು ಹೆಚ್ಚು ಜನ ಇದ್ದು, ಶಾಲೆಯನ್ನು ಮಂಜೂರು ಮಾಡಬೇಕು ಆ ಜನರು ಸರ್ಕಾರಕ್ಕೆ ಶಾಲೆಯನ್ನು ಮಂಜೂರು ಮಾಡಿಸಿಕೊಳ್ಳುವ ಸಲುವಾಗಿ ಒಂದು ಸಾವಿರ ರೂಪಾಯಿ ಗಳನ್ನೂ ಕೂಡ ಸರ್ಕಾರಕ್ಕೆ ತುಂಬಿದ್ದಾರೆ. ಆದರೂ ಇದುವರೆಗೂ ಯಾವುದೇ ನಿರ್ಣಯವನ್ನು ಸರ್ಕಾರ ತೆಗೆದುಕೊಂಡಿಲ್ಲ. ಅದಕ್ಕೆ ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುವುದೇನೆಂದರೆ ಇದರ ಬಗ್ಗೆ ಅವರು ಯಾವಾಗ ನಿರ್ಣಯ ತೆಗೆದುಕೊಳ್ಳುತ್ತಾರೆ ?

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಈ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುವುದರಿಂದ ಈಗ ನೇರವಾಗಿ ನಾವು ಪರಿಶೀಲನೆ ಮಾಡುವುದರ ಬದಲು